**2ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ , ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ : 2722/ 2024**
**ಚಾಸಾ - 20 /** ಪ್ರಾಸಾ- 8

| | |
|---|---|
| ಹೆಸರು | ಶ್ರೀನಿವಾಸಯ್ಯ |
| ತಂದೆಯ ಹೆಸರು | ಚಲುವಯ್ಯ |
| ವಯಸ್ಸು | 52 |
| ಉದ್ಯೋಗ | ಎ ಎಸ್ ಐ |
| ವಿಳಾಸ | ಬೆಂಗಳೂರು |

**ದಿನಾಂಕ:06-11-2025ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ-**

ನಾನು ದಿ.27-07-2021 ರಿಂದ ಇಲ್ಲಿಯವರೆಗೆ ತಾವರೆಕೆರೆ ಪೋಲೀಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕಾರ್ಯನಿರ್ವಹಿಸುತ್ತಿದ್ದೇನೆ.

ದಿನಾಂಕ 29-03-2024 ರಂದು ಈ ಪ್ರಕರಣದ ಕಡತವನ್ನು ಚಾಸಾ-19 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರೆಸಿರುತ್ತೇನೆ. ಅದೇ ದಿನದಂದು ಪಂಚನಾಮೆಗೆ ಸಹಕರಿಸುವಂತೆ ಹೇಳಿ ಚಾಸಾ-3 ಮತ್ತು 5ರವರಿಗೆ ನಿಪಿ-4ರಂತೆ ನೋಟಿಸ್ ನ್ನು ನೀಡಿರುತ್ತೇನೆ. ಈಗ ಸಾಕ್ಷಿಗೆ ನಿಪಿ-04 ಅನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು. ಅದೇ ದಿನದಂದು ಸಂಜೆ 6.15 ರಿಂದ 7.15 ಗಂಟೆವರೆಗೆ ಚಾಸಾ-1ರವರು ತೋರಿಸಿದ ಜಾಗದಲ್ಲಿ ನಿಪಿ-5ರಂತೆ ಪಂಚನಾಮೆಯನ್ನು ಮಾಡಿ ಚಾಸಾ-1, 3 ಮತ್ತು 5ರವರ ಸಹಿಯನ್ನು ಪಡೆದುಕೊಂಡಿರುತ್ತೇನೆ . ಈಗ ಸಾಕ್ಷಿಗೆ ನಿಪಿ-05 ಅನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-5(ಬಿ) ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಟಿಪ್ಪರ್ ಲಾರಿ ಸಂ. ಕೆಎ-25-ಎಎ-6915 ಮತ್ತು ದ್ವಿಚಕ್ರ ವಾಹನ ಸಂ. ಕೆಎ-05-ಎಎನ್-0403 ಅನ್ನು ವಶಪಡಿಸಿಕೊಂಡು ಮಾಲುಪಟ್ಟಿ ಸಂ. 78/2024 ಎಂದು ದಾಖಲಿಸಿಕೊಳ್ಳಲಾಯಿತು. ಈಗ ಸಾಕ್ಷಿಗೆ ನಿಪಿ-2 ಮತ್ತು 3 ನ್ನು ತೋರಿಸಿದ್ದು, ಅದರಲ್ಲಿ ಇರುವ ವಾಹನವನ್ನು ನಿಪಿ-5ರಂತೆ ಪಂಚನಾಮೆ ಮಾಡುವ ಸಮಯದಲ್ಲಿ

ವಶಪಡಿಸಿಕೊಳ್ಳಲಾಯಿತು. ಈಗ ಸಾಕ್ಷಿಗೆ ಮಾಲುಪಟ್ಟಿಯನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಮಾಲುಪಟ್ಟಿಯನ್ನು ನಿಪಿ-29 ಎಂದು ಸಾಕ್ಷಿಯ ಸಹಿಯನ್ನು ನಿಪಿ-29(ಎ) ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ಮಾಡುವ ಸಮಯದಲ್ಲಿ 3 ಫೋಟೋಗಳನ್ನು ತೆಗೆಯಲಾಯಿತು ಮತ್ತು ಒಂದು ಕಚ್ಚಾ ನಕ್ಷೆಯನ್ನು ತಯಾರು ಮಾಡಲಾಯಿತು. ಈಗ ಸಾಕ್ಷಿಗೆ ನಿಪಿ-6 ರಿಂದ 8 ನ್ನು ತೋರಿಸಿದ್ದು, ಸದರಿ ಫೋಟೋಗಳನ್ನು ಪಂಚನಾಮೆ ಮಾಡುವ ಸಮಯದಲ್ಲಿ ತೆಗೆಯಲಾಗಿದೆ. ಈಗ ಸಾಕ್ಷಿಗೆ ಕಚ್ಚಾ ನಕ್ಷೆಯನ್ನು ತೋರಿಸಿದ್ದು, ಸಾಕ್ಷಿಯು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಕಚ್ಚಾ ನಕ್ಷೆಯನ್ನು ನಿಪಿ-30 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-30(ಎ) ಎಂದುಗುರುತಿಸಲಾಯಿತು.

ದಿ.30-03-2024ರಂದು ರಾಜರಾಜೇಶ್ವರಿ ಆಸ್ಪತ್ರೆಯ ಶವಗಾರಕ್ಕೆ ಭೇಟಿ ನೀಡಿ ಮೃತ ರೇಖಾ ಪರಿಹಾರ್ ರವರ ಶವವನ್ನು ಚಾಸಾ-7 ರಿಂದ 9 ರವರ ಸಮಕ್ಷಮದಲ್ಲಿ ನಿಪಿ-09 ರಂತೆ ಶವ ತನಿಖೆಯನ್ನು ಬೆಳಗ್ಗೆ 9.30 ರಿಂದ11.30 ರವರೆಗೆ ಮಾಡಲಾಯಿತು. ಈಗ ಸಾಕ್ಷಿಗೆ ನಿಪಿ-09 ನ್ನು ತೋರಿಸಿದ್ದು, ಸಾಕ್ಷಿಯು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-09(ಎ) ಎಂದು ಗುರುತಿಸಲಾಯಿತು. ಶವತನಿಖಾ ಸಮಯದಲ್ಲಿ ಫೋಟೋಗಳನ್ನು ತೆಗೆಯಲಾಗಿದೆ. ಈಗ ಸಾಕ್ಷಿಗೆ 4 ಫೋಟೋಗಳನ್ನು ತೋರಿಸಿದ್ದು, ಅದನ್ನು ಶವ ತನಿಖೆ ಮಾಡುವ ಸಮಯದಲ್ಲಿ ತೆಗೆಯಲಾಗಿದೆ ಮತ್ತು ಸದರಿ ಫೋಟೋಗಳನ್ನು ನಿಪಿ-31 ರಿಂದ 34 ಎಂದು ಗುರುತಿಸಲಾಯಿತು. ನಿಪಿ-31 ರಿಂದ 34ರ ಫೋಟೋಗಳನ್ನು ನನ್ನ ಮೊಬೈಲ್ ನಿಂದ ಚಾಸಾ-17ರವರು ತೆಗೆದಿರುತ್ತಾರೆ ಮತ್ತು ಅದನ್ನು ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ. 65-ಬಿ ರಂತೆ ಪ್ರಮಾಣಿಕರಿಸಿ ಕಡತಕ್ಕೆ ಅಳವಡಿಸಿಕೊಳ್ಳಲಾಯಿತು. ಈಗ ಸಾಕ್ಷಿಗೆ ಪ್ರಮಾಣಪತ್ರವನ್ನು ತೋರಿಸಿದ್ದು, ಸಾಕ್ಷಿಯು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಪ್ರಮಾಣಪತ್ರವನ್ನು ನಿಪಿ-35 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-35(ಎ) ಎಂದು ಗುರುತಿಸಲಾಯಿತು. ನಂತರ ಹೆಚ್ಚಿನ ತನಿಖೆಗಾಗಿ ಕಡತವನ್ನು ಚಾಸಾ-21 ರವರಿಗೆ ವರ್ಗಾವಣೆ ಮಾಡಲಾಯಿತು.

ಪಾಟೀ **ಸವಾಲು- ಆರೋಪಿಯ ಪರ ಶ್ರೀಮತಿ. ಎನ್. ಕೆ, ವಕೀಲರಿಂದ-**

ನಾನು ಸಂಜೆ 6.15ರ ಸಮಯದಲ್ಲಿ ಸ್ಥಳದಲ್ಲಿಯೇ ನಿಪಿ-4ರಂತೆ ಸಾಕ್ಷಿದಾರರಿಗೆ ನೋಟಿಸ್ ನ್ನು ನೀಡಿರುತ್ತೇನೆ. ಸಾಕ್ಷಿದಾರರು ಸ್ಥಳದಲ್ಲಿಯೇ ಇದ್ದರು. ಸಂಜೆ 6.15 ರಿಂದ 7.15ರವರೆಗೆ ನಿಪಿ-5 ನ್ನು ತಯಾರು ಮಾಡಲಾಯಿತು. ನಿಪಿ-5ನ್ನು ಸ್ಥಳದಲ್ಲಿಯೇ ಲ್ಯಾಪ್ ಟಾಪ್ ಮುಖಾಂತರ ಬೆರಳಚ್ಚು ಮಾಡಲಾಯಿತು. ನಿಪಿ-5ನ್ನು ಠಾಣೆಯಲ್ಲಿ ತಯಾರು ಮಾಡಲಾಗಿದೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಈಗ ಸಾಕ್ಷಿಗೆ ನಿಪಿ-6 ಮತ್ತು 7ನ್ನು ತೋರಿಸಿದ್ದು, ಅದರಲ್ಲಿ ಯಾವುದೇ ವಾಹನಗಳು ಇರುವುದಿಲ್ಲ ಮತ್ತು ಅದರಲ್ಲಿ ದಿನಾಂಕ ಮತ್ತು ಸಮಯವನ್ನು ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ಯಾವುದೇ ವಾಹನವನ್ನು ಕೃತ್ಯ ನಡೆದ ಸ್ಥಳದಲ್ಲಿ ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

ಈಗ ಸಾಕ್ಷಿಗೆ ನಿಪಿ-2 , 3 ಮತ್ತು 8ನ್ನು ತೋರಿಸಿದ್ದು, ಅದರಲ್ಲಿ ದಿನಾಂಕ ಮತ್ತು ಸಮಯ ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಪಿ-2, 3, 6 ರಿಂದ 8 ನ್ನು ನೀವು ಭಾರತೀಯ ಸಾಕ್ಷ್ಯ ಅಧಿನಿಯದ ಕಲಂ.65-ಬಿ ರಂತೆ ಪ್ರಮಾಣಿಕರಿಸಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಪಿ-30 ನ್ನು ನೀವು ಠಾಣೆಯಲ್ಲಿ ತಯಾರು ಮಾಡಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಪಿ-09ರಂತೆ ನೀವು ಯಾವುದೇ ಶವ ತನಿಖೆ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನೀವು ಮೃತರ ಕುಟುಂಬಕ್ಕೆ ಸಹಾಯ ಮಾಡುವ ಉದ್ದೇಶದಿಂದ ಚಾಸಾ-1ರವರಿಂದ ಸುಳ್ಳು ದೂರನ್ನು ದಾಖಲಸಿಕೊಂಡು ನಿಮಗೆ ಅನುಕೂಲ ಆಗುವಂತೆ ತನಿಖೆಯನ್ನು ಮಾಡಿ ಸುಳ್ಳು ಸಾಕ್ಷ್ಯಾ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ,**
ಮಾಗಡಿ.